ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೪**

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತನಾಲ್ಕನೆಯ ಅಧಿವೇಶನ

## ಗುರುವಾರ, ದಿನಾಂಕ: ೧೬ನೇ ಸೆಪ್ಟೆಂಬರ್, ೨೦೨೧

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಗೃಹ ಸಚಿವರು

೩. ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

೪. ಜಲಸಂಪನ್ಮೂಲ ಸಚಿವರು

೫. ಅಬಕಾರಿ ಸಚಿವರು

೬. ಕಾರ್ಮಿಕ ಸಚಿವರು

---

## ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಡಾಂಬರೀಕರಿಸಿದ ರಸ್ತೆಗಳ ಸ್ಥಿತಿಗತಿ ಕುರಿತು

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) –**

೪೬ (೫೪೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬ ರಿಂದ ಇಲ್ಲಿಯವರೆಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ೧೯೮ ವಾರ್ಡ್‌ಗಳ ವ್ಯಾಪ್ತಿಯಲ್ಲಿ ನಗರದ ಎಲ್ಲಾ ರೀತಿಯ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಕೇಂದ್ರ, ರಾಜ್ಯ ಸರ್ಕಾರ ಮತ್ತು ಪಾಲಿಕೆಯಿಂದ ಒಟ್ಟು ಎಷ್ಟು ಮೊತ್ತದ ಕಾಮಗಾರಿಗಳಿಗೆ

ಆಡಳಿತಾತ್ಮಕ ಹಾಗೂ ತಾಂತ್ರಿಕ ಒಪ್ಪಿಗೆ ನೀಡಲಾಗಿದೆ; (ವಾರ್ಷಿಕವಾರು ಮಾಹಿತಿಯನ್ನು ನೀಡುವುದು)

(ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ಮಾರ್ಟ್ ಸಿಟಿ ಟೆಂಡರ್ ಶೂರ್ ಯೋಜನೆಗಳಲ್ಲಿ ನಿರ್ಮಾಣವಾದ ರಸ್ತೆಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು) ಮತ್ತು ಇದಕ್ಕೆ ತಗುಲಿದ ಅನುದಾನ ಎಷ್ಟು; (ಮಾಹಿತಿ ಒದಗಿಸುವುದು)

(ಇ) ಬೆಂಗಳೂರು ಮಹಾನಗರದ ವ್ಯಾಪ್ತಿಯಲ್ಲಿರುವ ಎಲ್ಲಾ ರೀತಿಯ ಡಾಂಬರೀಕರಿಸಿದ ರಸ್ತೆಗಳ ಒಟ್ಟು ಉದ್ದವೆಷ್ಟು; ಈ ಪೈಕಿ ಚಾಲನಾಸೂಕ್ತ (Mortoable)-Arterial ಮತ್ತು Sub-Arterial ರಸ್ತೆಗಳ ಒಟ್ಟು ಉದ್ದವೆಷ್ಟು; ಹಾಗೂ ಉಳಿದ ಡಾಂಬರೀಕರಣವಾದ ರಸ್ತೆಗಳ ಉದ್ದ ಎಷ್ಟು ಹಾಗೂ ವೈಟ್ ಟಾಂಪಿಗ್ (ಕಾಂಕ್ರೀಟ್), ಮೇಲ್ಸೇತುವೆ, ಸಬ್‌ವೇ, ಗ್ರೇಡ್ ಸಪರೇಟರ್ ರಸ್ತೆಗಳ ಉದ್ದ ಎಷ್ಟು; (ವಿವರ ನೀಡುವುದು)

(ಈ) ಡಾಂಬರೀಕರಣದ (ವೈಟ್ ಟಾಂಪಿಗ್, ಮೇಲ್ಸೇತುವೆ, ಸಬ್ ವೇ, ಗ್ರೇಡ್ ಸಪರೇಟರ್) ರಸ್ತೆಗಳ ಪೈಕಿ Thermal Cracks, Pot-holes, Stripping, debonding, bleeding, raveling ಇಲ್ಲದಂತ ಅಥವಾ ದುರಸ್ತಿಗೆ ಒಳಪಡದೆ ಇರುವ ಸುಮಾರು ೧ ಕಿ.ಮೀ. ಉದ್ದದ ರಸ್ತೆಯು ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಇದೆಯೇ; ಇದ್ದಲ್ಲಿ, ಈ ರೀತಿಯ ಉತ್ತಮ ರಸ್ತೆಗಳ ಪಟ್ಟಿಯನ್ನು ನೀಡುವುದು; (ಕಾಂಕ್ರೀಟ್ ರಸ್ತೆ ಮೇಲ್ಸೇತುವೆ, ಸಬ್ ವೇ, ಗ್ರೇಡ್ ಸಪರೇಟರ್ ರಸ್ತೆಗಳನ್ನು ಹೊರತುಪಡಿಸಿ)

(ಉ) Arterial ಮತ್ತು Sub-Arterial ರಸ್ತೆಗಳ ನಿರ್ಮಾಣದಲ್ಲಿ ತಾಂತ್ರಿಕತೆ ಇಂಡಿಯನ್ ರೋಡ್ ಕಾಂಗ್ರೆಸ್‌ನ ನಿಷ್ಠಾಚಾರ ಮತ್ತು ನಿಯಮಗಳನ್ನು ಪಾಲಿಸಲಾಗಿದೆಯೇ; ಹಾಗೂ ಆಯಾ ರಸ್ತೆಗಳಿಗೆ ಅನ್ವಯಿಸುವ ತಾಂತ್ರಿಕತೆಯನ್ನು ಅಳವಡಿಸಿಕೊಂಡು ರಸ್ತೆ ನಿರ್ಮಾಣ ಮಾಡಲಾಗಿದೆಯೇ? (ವಿವರಗಳನ್ನು ನೀಡುವುದು)

## ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿನ ಸಿಬ್ಬಂದಿ ಕೊರತೆ ಕುರಿತು

**ಶ್ರೀ ಬಿ.ಎಂ. ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೭ (೪೮೦+೪೮೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಯಾವ ಸಾಲಿನಿಂದ ಕಾರ್ಯಾರಂಭ ಮಾಡಿದೆ; ಈ ನಿಗಮದಿಂದ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳಾವುವು;

(ಆ) ಕಳೆದ ೩ ವರ್ಷಗಳ ಅವಧಿಯಲ್ಲಿ ಸದರಿ ನಿಗಮಕ್ಕೆ ಬಿಡುಗಡೆ ಮಾಡಲಾದ ಅನುದಾನ ಎಷ್ಟು; ಅವುಗಳಲ್ಲಿ ಖರ್ಚಾದ ಮೊತ್ತವೆಷ್ಟು; (ವರ್ಷವಾರು, ಯೋಜನೆವಾರು ಮಾಹಿತಿ ಒದಗಿಸುವುದು)

(ಇ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕಛೇರಿಗಳಿಗೆ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; (ಕೇಂದ್ರ ಹಾಗೂ ಜಿಲ್ಲಾ ಕಛೇರಿವಾರು ವಿವರ ನೀಡುವುದು)

(ಈ) ಪ್ರಸ್ತುತ ಕೇಂದ್ರ ಹಾಗೂ ಜಿಲ್ಲಾ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಅವರುಗಳಲ್ಲಿ ನಿಗಮದ ಖಾಯಂ ನೌಕರರೆಷ್ಟು; ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; ಹಾಗೂ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು;

(ಉ) ಸದರಿ ಕಛೇರಿಗಳಲ್ಲಿ ಅವಶ್ಯಕತೆಗಿಂತಲು ಕಡಿಮೆ ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ,

ಅವಶ್ಯಕತೆಗನುಗುಣವಾಗಿ ನಿಗಮದಲ್ಲಿ ಖಾಯಂ ಸಿಬ್ಬಂದಿಗಳನ್ನು ನೇಮಕ ಮಾಡಲು ಸರ್ಕಾರ ಕ್ರಮಕ್ಕೈಗೊಳ್ಳುವುದೇ ಹೌದಾದಲ್ಲಿ ಯಾವ ಕಾಲಮಿತಿಯೊಳಗೆ ಸರ್ಕಾರವು ಕ್ರಮಕ್ಕೈಗೊಳ್ಳುವುದು? (ವಿವರ ಒದಗಿಸುವುದು)

## ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೆ ನಿವೇಶನ ಹಂಚಿಕೆ ಮಾಡಿರುವ ಬಗ್ಗೆ

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) –**

೩೮ (೬೧೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೆ ಬಿಡಿಎನಿಂದ ಯಾವ್ಯಾವ ಜಾಗದಲ್ಲಿ ಎಷ್ಟೆಷ್ಟು ವಿಸ್ತೀರ್ಣದ ಸಗಟು ಜಮೀನು ಮತ್ತು ಬಡಾವಣೆಗಳಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; (ಜಮೀನು, ನಿವೇಶನಗಳ ಸಂಖ್ಯೆ, ವಿಸ್ತೀರ್ಣವಾರು ನೋಂದಾಯಿತ ಕ್ರಯಪತ್ರಗಳ ವಿವರ ನೀಡುವುದು)

(ಆ) ಬಿನ್ನಿಪೇಟೆ ಕಾರ್ಖಾನೆಯ ಇಡಬ್ಲ್ಯುಎಸ್ ನೌಕರರಿಗೆ ನಿವೇಶನ ಹಂಚಿಕೆ ಮಾಡುವಂತೆ ಸಂಘದ ವತಿಯಿಂದ ಯಾವಾಗ ಮನವಿ ಮಾಡಲಾಗಿತ್ತು; ಎಷ್ಟು ಹಂತಗಳಲ್ಲಿ ಹಣ ಪಾವತಿಸಲಾಗಿತ್ತು; ಎಷ್ಟು ಹಂತಗಳಲ್ಲಿ ಹಣ ವಾಪಸ್ಸು ಪಡೆಯಲಾಗಿತ್ತು; (ಸಂಘದ ಯಾರ್ಯಾರ ಸದಸ್ಯರ ಹೆಸರಿನಲ್ಲಿ ಹಣ ಪಾವತಿಸಲಾಗಿತ್ತು ಹಾಗೂ ಹಣ ಪಾವತಿಸಿರುವ ದಾಖಲೆಗಳನ್ನು ಒದಗಿಸುವುದು)

(ಇ) ಸಂಘಕ್ಕೆ ಜಮೀನು ಮತ್ತು ನಿವೇಶನ ನೀಡುವುದಕ್ಕೆ ಸಂಬಂಧಪಟ್ಟಂತೆ ಅನುಮತಿಸಿರುವ ಮತ್ತು ನಿರಾಕರಿಸಿರುವ ಪ್ರಾಧಿಕಾರದ ಠರಾವು ಪ್ರತಿಗಳು, ಪ್ರಾಧಿಕಾರದ ಕಾನೂನು ಅಧಿಕಾರಿಗಳ ಅಭಿಪ್ರಾಯಗಳು ಮತ್ತು ನ್ಯಾಯಾಲಯದ ತೀರ್ಪಿನ ಪ್ರತಿಗಳಿದ್ದಲ್ಲಿ ಒದಗಿಸುವುದು;

(ಈ) ಮದ್ರಾಸ್ ಹೈಕೋರ್ಟ್ ತೀರ್ಪಿನ ನಂತರ ಬಿನ್ನಿಮಿಲ್ ಆಡಳಿತ ಮಂಡಳಿಯು ನೌಕರರಿಗೆ ೧೦ ಎಕರೆ ಜಾಗದಲ್ಲಿ ನಿವೇಶನ ಹಂಚಿಕೆ

ಮಾಡಿರುವ ಅರಿವು ಪ್ರಾಧಿಕಾರಕ್ಕಿದೆಯೇ; ಪ್ರಾಧಿಕಾರದಿಂದ ಹಂಚಿದ ನಿವೇಶನಗಳು ಸಂಘದ, ನೈಜ ಫಲಾನುಭವಿಗಳಿಗೆ ತಲುಪಿದೆಯೇ ಎಂಬುದನ್ನು ಪರಿಶೀಲಿಸುವ ಹೊಣೆಗಾರಿಕೆ ಪ್ರಾಧಿಕಾರಕ್ಕಿಲ್ಲವೇ;

(ಉ) ಸದರಿ ಹಂಚಿಕೆ ಬಗ್ಗೆ ದಾಖಲಾಗಿರುವ ದೂರುಗಳು ಮತ್ತು ನಡೆದಿರುವ ತನಿಖಾ ವರದಿ ಪ್ರತಿಗಳನ್ನು ಒದಗಿಸುವುದು?

## ಲಾಕಪ್‌ಡೆತ್ ಪ್ರಕರಣಗಳನ್ನು ತೊಡೆದು ಹಾಕುವ ಕುರಿತು

**ಡಾ. ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೯ (೫೨೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಸಂಭವಿಸಿರುವ ಲಾಕಪ್‌ಡೆತ್ ಪ್ರಕರಣಗಳು ಎಷ್ಟು; (ಜಿಲ್ಲಾವಾರು, ವರ್ಷಾವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಈ ಲಾಕಪ್‌ಡೆತ್ ಪ್ರಕರಣಗಳಿಗೆ ಸರ್ಕಾರವು ಕಂಡುಕೊಂಡ ಕಾರಣಗಳು ಏನು; (ಪ್ರಕರಣವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಸಂಶಯಾಸ್ಪದ ಕಾರಣವಾಗಿ ಬಂಧಿಸಲಾದ ವ್ಯಕ್ತಿಗಳನ್ನು ಶೀಘ್ರ ನ್ಯಾಯಾಲಯದ ಮುಂದೆ ಹಾಜರುಪಡಿಸುವಲ್ಲಿ ಇರುವ ವಿಳಂಬವನ್ನು ಸರ್ಕಾರವು ಗಂಭೀರವಾಗಿ ಆಲೋಚಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಇರುವ ನ್ಯೂನತೆ ಕುರಿತಾಗಿ ಸಂಪೂರ್ಣ ವಿವರ ಒದಗಿಸುವುದು;

(ಈ) ಲಾಕಪ್‌ಡೆತ್ ಪ್ರಕರಣಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಸರ್ಕಾರವು ಸಕಾರಾತ್ಮಕವಾದ ಹಾಗೂ ಪರಿಹಾರಾತ್ಮಕವಾದ ಯೋಜನೆಯನ್ನು ರೂಪಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತು ಮಾಹಿತಿಯನ್ನು ಒದಗಿಸುವುದು?

## ಕೆರೆ ತುಂಬಿಸುವ ಯೋಜನೆ ಕುರಿತು

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೦ (೫೧೩) ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೆರೆ ತುಂಬಿಸುವ ಯೋಜನೆ ಚಾಲನೆಯಲ್ಲಿದೆಯೇ;

(ಆ) ತುಂಗಭದ್ರಾ ಜಲಾಶಯದಿಂದ ನೀರನ್ನು ಎತ್ತಿ ಬಳ್ಳಾರಿ ಜಿಲ್ಲೆಯ ಗ್ರಾಮಾಂತರ ಹಾಗೂ ಕೊಟ್ಟೂರು ಮತ್ತು ಇತರೆ ೧೧ ಕೆರೆಗಳನ್ನು ತುಂಬಿಸುವ ಯೋಜನೆ ಯಾವ ಹಂತದಲ್ಲಿದೆ;

(ಇ) ಇದಕ್ಕಾಗಿ ಮೀಸಲಿಟ್ಟಿರುವ ಅನುದಾನವೆಷ್ಟು?

## ಆರ್ಥಿಕ ಇಲಾಖೆಯ ಮಿತವ್ಯಯ ಆದೇಶ ಸಂ: ಆಇ/೧೫೭/ ವೆ–೦೮/೨೦೨೦ನ್ನು ಹಿಂಪಡೆಯುವ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೫೧ (೫೬೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋವಿಡ್–೧೯ ಸಮಸ್ಯೆಯ ಹಿನ್ನಲೆಯಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಹಾಗೂ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವುದನ್ನು ಆರ್ಥಿಕ ಇಲಾಖೆಯ ಸುತ್ತೋಲೆ ಸಂ: ಆಇ/೧೫೭/ವೆ–೦೮/೨೦೨೦ರ ಆದೇಶದಂತೆ ತಡೆಹಿಡಿಯಲಾಗಿದೆಯೇ;

(ಆ) ಸದರಿ ಆದೇಶವನ್ನು ಆರ್ಥಿಕ ಇಲಾಖೆಯು ಹಿಂಪಡೆದಿದೆಯೇ; ಅಥವಾ ಸಡಿಲಗೊಳಿಸಿದೆಯೇ; ಸಡಿಲಗೊಳಿಸಿದ್ದಲ್ಲಿ, ಸಡಿಲಿಕೆಯ ಅಂಶಗಳನ್ನು ವಿವರಣೆಯೊಂದಿಗೆ ಒದಗಿಸುವುದು;

(ಇ) ಆರ್ಥಿಕ ಮಿತವ್ಯಯದ ಆದೇಶವನ್ನು ಹಿಂಪಡೆಯದೇ ಇದ್ದಲ್ಲಿ ಯಾವ ಕಾಲ ಮಿತಿಯೊಳಗೆ ಹಿಂಪಡೆಯಲಾಗುವುದು? (ಸಂಪೂರ್ಣ ವಿವರವನ್ನು ಒದಗಿಸುವುದು)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಂಡಿರುವ ಹೊರವರ್ತುಲ ರಸ್ತೆ (Peripheral Ring Road) ನಿರ್ಮಾಣದ ಕುರಿತು

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) –**

೫೨ (೫೮೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಂಡಿರುವ ಹೊರವರ್ತುಲ ರಸ್ತೆ (Peripheral Ring Road) ನಿರ್ಮಾಣವನ್ನು ಕೈಗೊಳ್ಳಲು ಅಂತರ ರಾಷ್ಟ್ರೀಯ ಸ್ಪರ್ಧಾತ್ಮಕ ಬಿಡ್ಡಿಂಗ್‌ಗಳನ್ನು ಆಹ್ವಾನಿಸಲು ನಿರ್ಧರಿಸಿದೆಯೇ; (ಹಾಗಿದ್ದಲ್ಲಿ ಈ ಕಾಮಗಾರಿಯ ಪೂರ್ಣ ವಿವರಗಳ ಮತ್ತು ಸ್ಪರ್ಧಾತ್ಮಕ ಟೆಂಡರ್‌ನ ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಹೊರವರ್ತುಲ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರ ಈಗಾಗಲೇ ವಶಪಡಿಸಿಕೊಂಡಿದೆಯೇ; ಹಾಗಿದ್ದಲ್ಲಿ, ವಶಪಡಿಸಿಕೊಂಡ ಭೂಮಿಯ ವಿಸ್ತೀರ್ಣ ಮತ್ತು ಭೂಸ್ವಾಧೀನದ ಒಟ್ಟು ವೆಚ್ಚವೆಷ್ಟು; ಈ ಪೈಕಿ ಈಗಾಗಲೇ ಪಾವತಿಸಿರುವ ಪರಿಹಾರ ಮತ್ತು ಬಾಕಿಯಿರುವ ಮೊತ್ತವೆಷ್ಟು;

(ಇ) ಹೊರವರ್ತುಲ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಅನುಮತಿಯನ್ನು ಪರಿಸರ ಇಲಾಖೆ ಮತ್ತು ಇತರೆ ಇಲಾಖೆಗಳಿಂದ ಪಡೆಯಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು)

## ಸಮತೋಲನಾ ಜಲಾಶಯ ನಿರ್ಮಾಣ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೩ (೫೩೦) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ತಿಂತಿಣಿ ಬ್ರಿಡ್ಜ್ ಹತ್ತಿರ (Balancing Reservoir) ಸಮತೋಲನಾ ಜಲಾಶಯ ನಿರ್ಮಾಣ ಕಾಮಗಾರಿಯು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಎಷ್ಟು ಟಿ.ಎಂ.ಸಿ. ನೀರಿನ ಸಂಗ್ರಹಣೆಯಾಗುವುದು;

(ಇ) ಈ ಕಾಮಗಾರಿಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

## ಕೃಷ್ಣಾ ಮೇಲ್ದಂಡೆ ಯೋಜನೆಯ ಸಂತ್ರಸ್ಥರಿಗೆ ಪರಿಹಾರ ಒದಗಿಸುವ ಬಗ್ಗೆ

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೫೪ (೬೦೭) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ೩ನೇ ಹಂತದ ಅನುಷ್ಠಾನಕ್ಕಾಗಿ ಅವಶ್ಯವಿರುವ ಭೂ–ಪ್ರದೇಶದ ವಿಸ್ತೀರ್ಣವೆಷ್ಟು;

(ಆ) ಅದಕ್ಕಾಗಿ ಎಷ್ಟು ಎಕರೆ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ;

(ಇ) ಭೂ–ಸ್ವಾಧೀನಕ್ಕೊಳಗಾದ ಎಲ್ಲಾ ಸಂತ್ರಸ್ಥರಿಗೆ ಪರಿಹಾರ ಒದಗಿಸಲಾಗಿದೆಯೇ;

(ಈ) ಇಲ್ಲಿಯವರೆಗೆ ಸಂತ್ರಸ್ಥರಿಗೆ ನೀಡಿರುವ ಪರಿಹಾರದ ಮೊತ್ತವೆಷ್ಟು; ಹಾಗೂ ಸಂತ್ರಸ್ಥರಿಗೆ ಇನ್ನೂ ನೀಡಬೇಕಾಗಿರುವ ಪರಿಹಾರದ ಬಾಕಿ ಮೊತ್ತವೆಷ್ಟು;

(ಉ) ಇನ್ನುಳಿದ ಸಂತ್ರಸ್ಥರಿಗೆ ಯಾವ ಕಾಲಮಿತಿಯಲ್ಲಿ ಪರಿಹಾರ ಒದಗಿಸಲಾಗುವುದು?

## ಏತ ನೀರಾವರಿ ಯೋಜನೆಗಳಿಗೆ ಭೂಸ್ವಾಧೀನ ಮಾಡಿಕೊಂಡಿರುವ ಕುರಿತು

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೫ (೫೧೭) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಕೈಗೊಂಡಿರುವ ಏತ ನೀರಾವರಿ ಯೋಜನೆಗಳು ಯಾವುವು; ಈ ಯೋಜನೆಗಳಿಗಾಗಿ ಎಷ್ಟು ಗ್ರಾಮಗಳಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ; (ಜಮೀನು ಕಳೆದುಕೊಂಡಿರುವ ಸಂತ್ರಸ್ತರ ಹೆಸರು ಮತ್ತು ಊರಿನ ವಿವರಗಳ ಮಾಹಿತಿಯನ್ನು ನೀಡುವುದು)

(ಆ) ಈ ಯೋಜನೆಗಳಿಗಾಗಿ ಭೂಮಿ ಕಳೆದುಕೊಂಡ ರೈತರಿಗೆ ಸರ್ಕಾರದಿಂದ ಪರಿಹಾರ ನೀಡಲು ಎಕರೆವಾರು ನಿಗದಿಪಡಿಸಿರುವ ಬೆಲೆ ಎಷ್ಟು; ಇದಕ್ಕಾಗಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು; ಇದರಲ್ಲಿ ಪರಿಹಾರ ನೀಡಿರುವ ಮೊತ್ತವೆಷ್ಟು;

(ಇ) ಈ ಯೋಜನೆಗಳಡಿ ಇದುವರೆಗೂ ಪರಿಹಾರ ಪಡೆದಿರುವ ಭೂಸಂತ್ರಸ್ತರ ಹೆಸರು, ಪರಿಹಾರದ ಮೊತ್ತ ಮತ್ತು ಊರಿನ ವಿವರಗಳನ್ನು ನೀಡುವುದು;

(ಈ) ಈ ಯೋಜನೆಗಳಡಿ ಇದುವರೆಗೂ ಪರಿಹಾರ ಪಡೆಯದ ಭೂ ಸಂತ್ರಸ್ತರ ಹೆಸರು, ಪರಿಹಾರದ ಮೊತ್ತ ಮತ್ತು ಊರಿನ ವಿವರಗಳನ್ನು ನೀಡುವುದು; ಪರಿಹಾರ ಪಡೆಯುವ ಭೂ ಸಂತ್ರಸ್ತರಿಗೆ ಪರಿಹಾರ ನೀಡಲು ವಿಳಂಬವಾಗಿರುವುದಕ್ಕೆ ಕಾರಣಗಳೇನು;

(ಉ) ಈ ಯೋಜನೆಗಳಡಿ ಕೈಗೊಂಡಿರುವ ಕಾಮಗಾರಿಗಳು ಯಾವುವು; ಕಾಮಗಾರಿಗಳು ಯಾವ ಹಂತದಲ್ಲಿವೆ; ಈ ಕಾಮಗಾರಿಗಳಿಗಾಗಿ ಮಂಜೂರಾದ ಹಾಗೂ ಬಿಡುಗಡೆಯಾಗಿರುವ ಅನುದಾನವೆಷ್ಟು; ಇದರಲ್ಲಿ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು? (ಕಾಮಗಾರಿವಾರು ವಿವರ ನೀಡುವುದು)

## ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ಮತ್ತು ರೋಹಿಂಗ್ಯಾಗಳ ಕುರಿತು

**ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) –**

೫೬. (೫೩೯) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅನಧಿಕೃತವಾಗಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ಹಾಗೂ ರೋಹಿಂಗ್ಯಾ ಮುಸ್ಲಿಮರನ್ನು ಗುರುತಿಸಲಾಗಿದೆಯೇ; ಈ ಅನಧಿಕೃತ ಅಕ್ರಮ ವಲಸಿಗರಿಗೆ ಆಧಾರ್ ಕಾರ್ಡ್ ಮತ್ತು ಇತರ ಸರ್ಕಾರಿ ಇಲಾಖೆಗಳಿಂದ ಗುರುತಿನ ಚೀಟಿ ಮಾಡಿ ಕೊಟ್ಟಿರುವ ಎಷ್ಟು ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗಿದೆ; ಎಷ್ಟು ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆ; (ವಿವರ ನೀಡುವುದು)

(ಆ) ರಾಜ್ಯದ ಎಷ್ಟು ಮಸೀದಿ ಮತ್ತು ಮದರಸಗಳಲ್ಲಿ ಅಕ್ರಮ ಬಾಂಗ್ಲಾ ಮತ್ತು ರೋಹಿಂಗ್ಯಾ ಮುಸ್ಲಿಮರು ವಾಸವಾಗಿದ್ದಾರೆ; (ಮಾಹಿತಿ ನೀಡುವುದು)

(ಇ) ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ;

(ಈ) ಅಕ್ರಮ ವಲಸಿಗರಿಗೆ ಅಶ್ರಯ ನೀಡಿದ ಎಷ್ಟು ಜನರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಕಳೆದ ಎರಡು ವರ್ಷದಲ್ಲಿ ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವವರ ಅಕ್ರಮ ವಲಸಿಗರು ಜಾಮೀನಿನ ಮೇಲೆ ಬಿಡುಗಡೆಯಾದ ಬಳಿಕ ನ್ಯಾಯಾಲಯಕ್ಕೆ ಹಾಜರಾಗದೆ ದೇಶ ತೊರೆದಿರುವವರ ಸಂಖ್ಯೆ ಎಷ್ಟು? (ಪ್ರಕರಣವಾರು ವಿವರ ನೀಡುವುದು)

## ಜೀರೋ ಟ್ರಾಫಿಕ್ ದುರುಪಯೋಗದ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೭ (೬೨೩) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಯಾವ ಯಾವ ಗಣ್ಯವ್ಯಕ್ತಿಗಳಿಗೆ ಜೀರೋ ಟ್ರಾಫಿಕ್ ವ್ಯವಸ್ಥೆಯನ್ನು ನೀಡಲಾಗುತ್ತದೆ; (ಸಂಪೂರ್ಣ ಮಾಹಿತಿಯನ್ನು ನೀಡುವುದು)

(ಆ) ಸಚಿವರಾಗುವ ಮೊದಲೇ ಶಾಸಕರಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಾಜಭವನಕ್ಕೆ ಜೀರೋ ಟ್ರಾಫಿಕ್‌ನಲ್ಲಿ ಬಂದಿದ್ದು, ನಿಯಮ ಉಲ್ಲಂಘನೆ ಅಲ್ಲವೇ;

(ಇ) ಈ ಘಟನೆಗೆ ಸಹಕರಿಸಿದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ;

(ಈ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿಗಳು ಮಾಜಿ ಸಚಿವರನ್ನು ಸ್ವಾಗತಿಸಲು ತೆರಳಲು ಸೂಚಿಸಿದ್ದವರು ಯಾರು; ಈ ಎಲ್ಲಾ ಅಧಿಕಾರಿಗಳ ವಿರುದ್ಧ ಯಾವ ಯಾವ ಕ್ರಮವನ್ನು ಸರ್ಕಾರ ಜರುಗಿಸಲಾಗಿದೆ;

(ಉ) ೨೦೧೯ರಲ್ಲಿ ೧೭ ಜನ ಅನರ್ಹ ಶಾಸಕರನ್ನು ವಿಧಾನಸೌಧಕ್ಕೆ ಕರೆತರಲು ಜೀರೋ ಟ್ರಾಫಿಕ್‌ನಲ್ಲಿ ಕರೆ ತಂದ ಪ್ರಕರಣದ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

## ಸಣ್ಣ ನೀರಾವರಿ ಇಲಾಖಾ ಕೆರೆಗಳ ಅಭಿವೃದ್ಧಿ ಕುರಿತು

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೩೮ (೩೨೮) ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಗೆ ಬರುವ ಕೆರೆಗಳೆಷ್ಟು; (ವಿವರ ನೀಡುವುದು)

(ಆ) ಈ ಕೆರೆಗಳ ವಿಸ್ತೀರ್ಣ ಎಷ್ಟು; ಇದರಲ್ಲಿ ಒತ್ತುವರಿಯಾದ ಕೆರೆಗಳು ಎಷ್ಟು; (ವಿವರ ನೀಡುವುದು)

(ಇ) ಸದರಿ ಕೆರೆ ಕಟ್ಟೆಗಳನ್ನು ಸರ್ವೆ ಮಾಡಿ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಈ) ಈ ಕೆರೆಗಳ ಹೂಳುತೆಗೆದು ಅಭಿವೃದ್ಧಿಪಡಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು)

## ಸರಣಿ ಬ್ಯಾರೇಜ್ ಕಾಮಗಾರಿಯಲ್ಲಿ ವ್ಯಾಪಕ ಭ್ರಷ್ಟಾಚಾರವಾಗಿರುವ ಕುರಿತು

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೩೯ (೩೩೧) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ಮಾಂಜ್ರಾ ಸರಣಿ ಬ್ಯಾರೇಜ್‌ಗಳಲ್ಲಿನ ಗೇಟ್ ಸಮಸ್ಯೆಯಾಗಿ ನೀರು ನಿಲ್ಲದಿರುವುದರ ಬಗ್ಗೆ ತನಿಖೆಗೆ ಹೈಕೋರ್ಟ್ ಆದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅದರ ಸ್ಪಷ್ಟ ಮಾಹಿತಿ ಒದಗಿಸುವುದು;

(ಆ) ೦೪ ಬ್ಯಾರೇಜ್‌ಗಳ ನಿರ್ಮಾಣಕ್ಕೆ ಖರ್ಚು ಮಾಡಲಾಗಿರುವ ಹಣವೆಷ್ಟು; ಮತ್ತು ಯಾವ ವರ್ಷದಲ್ಲಿ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಲಾಗಿದೆ; (ಗುತ್ತಿಗೆದಾರರುಗಳ ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಸರಣಿ ಬ್ಯಾರೇಜ್‌ಗಳ ನಿರ್ಮಾಣದಿಂದ ಒಟ್ಟು ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ; (ಸ್ಪಷ್ಟವಾದ ವಿವರ ನೀಡುವುದು)

(ಈ) ಹಾಗಿದ್ದಲ್ಲಿ, ನೂರಾರು ಕೋಟಿ ರೂಪಾಯಿ ವೆಚ್ಚ ಮಾಡಿ ನಿರ್ಮಾಣ ಮಾಡಲಾದ ಯೋಜನೆಯಲ್ಲಿ ಅಕ್ರಮ ಮತ್ತು ಲೋಪದೋಷಗಳು ಉಂಟಾಗಲು ಕಾರಣಗಳೇನು; ಇದಕ್ಕೆ ಕಾರಣರಾದವರುಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

## ಕೊಡಗು ಜಿಲ್ಲೆಯಲ್ಲಿ ನದಿಗಳಲ್ಲಿನ ಹೂಳನ್ನು ತೆಗೆಯುವ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೬೦ (೫೭೮) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಎಷ್ಟು ನದಿಗಳಲ್ಲಿನ ಹೂಳನ್ನು ಹೊರತೆಗೆಯಲಾಗಿದೆ;

(ಆ) ಈ ಸಂಬಂಧ ಕಳೆದ ೩ ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಾವುವು; (ವಿವರ ಒದಗಿಸುವುದು)

(ಇ) ಸದರಿ ಕಾಮಗಾರಿಗಳಿಗೆ ವ್ಯಯಿಸಿರುವ ಅನುದಾನವೆಷ್ಟು; (ವಿವರ ಒದಗಿಸುವುದು) ಹಾಗೂ ಅನುಷ್ಠಾನ ಮಾಡಲಾಗಿರುವ ಕಾಮಗಾರಿಗಳು ಯಾವುವು; (ವರ್ಷವಾರು ಮಾಹಿತಿ ನೀಡುವುದು)

(ಈ) ಜಿಲ್ಲೆಯಲ್ಲಿ ನದಿಗಳಲ್ಲಿನ ಹೂಳು ತೆಗೆಯುವ ಕಾಮಗಾರಿಗಳಿಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಒದಗಿಸಲಾಗಿರುವ ಅನುದಾನವೆಷ್ಟು? (ಅನುಷ್ಠಾನಗೊಳಿಸಲಾಗುವ ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ 332 – ಪ್ರತಿಗಳು (ಪಿ1)

**List of Questions for Oral Answers**

**LIST - 04**

**Total No. of Questions - 15**

# KARNATAKA LEGISLATIVE COUNCIL

## ONE HUNDRED AND FORTY-FOURTH SESSION

## Thursday, the 16th September, 2021

---

**GROUP - IV**

1. Chief Minister
2. Minister for Home
3. Minister for Minor Irrigation and Law, Parliamentary Affairs and Legislation
4. Minister for Water Resources
5. Minister for Excise
6. Minister for Labour

---

### CONDITION OF ASPHALTED ROADS IN THE LIMITS OF BBMP

**Sri P.R. Ramesh (Nominated) -**

46 (598) will the Chief Minister be pleased to state:-

a. the total cost of the works which have got administrative and technical approval by the Central and the State Government and BBMP for the construction and maintenance of all kinds of roads of the city in the limits of all 198 wards of BBMP from 2015-16 to till date; (yearwise information be furnished)

b. the number of roads that are constructed under Smart city TenderSURE scheme in the limits of Bruhat Bengaluru Mahanagar Palike; (complete details be furnished) and the grant incurred for the same; (information be furnished)

c. the total length of all kinds of asphalted roads in the limits of the BBMP; out of them, the length of the motorable-Arterial and Sub-Arterial roads; and the length of the remaining asphalted roads and the length of the White topping(concrete), flyovers, Sub-way, Grade separator; (details be furnished)

d. whether there is a Km length of road without thermal crack, pot-holes, stripping, debonding, bleeding, raveling or without repair among the asphalted roads (white topping, flyover, sub-way Grade separator) in the limits of Bengaluru Mahanagara Palike; if so, the list of such good roads be furnished; (except concrete road, fly over, sub-way, grade separator roads)

e. whether the technicality and the protocol and rules of the Indian Roads Congress (IRC) have been followed in construction of Arterial and sub-arterial roads; and whether the road has been constructed by adopting suitable technology to the respective roads? (the details be furnished)

## SHORTAGE OF STAFF IN MINORITIES DEVELOPMENT CORPORATION

**Sri B.M. Farooq (Elected by Legislative Assembly) -**

**Sri Naseer Ahmed (Elected by Legislative Assembly) -**

47 (480+481) Will the Chief Minister be pleased to state:-

a. the year from which the Karnataka Minorities Development Corporation has been started work; the particulars of the schemes chalkedout by the Corporation for the development of minorities;

b. the grant released to the said corporation for the last 5 years; out of which, the grant spent thereof; (yearwise, schemewise information be furnished)

c. the total number of posts that have been sanctioned to the offices of the Karnataka Minorities Development

Corporation (details of headquarters and district officewise be furnished)

d. the number of staff who are working in headquarters and district offices at present; among them, the number of permanent employees in the corporation; the number of employees who are working on deputation and outsource basis;

e. whether it has come to the notice of the Government that it is being difficult to implement the schemes due to few permanent employees are working than the requirement in the said office; if so, whether the steps would be taken by the Government to recruit the permanent staff in the corporation as per the requirement; if so, the time limit within which the steps would be taken by the Government? (details be furnished)

## ALLOTMENT OF SITES TO BINNIPETE RESIDENTS SEVA SANGHA

**Sri Ayanur Manjunath (Graduates Constituency) -**

48 (610) will the Chief Minister be pleased to state:-

a. the particulars of the places in which the extent of land and the layouts where the sites have been allocated by the BDA to the Binnipete Residents Seva Sangha; (the details of the Land, site number, Extent wise land and registered sale deeds be furnished)

b. the date on which the representation has been submitted by the sangha to allot the sites to the employees EWS of Binnipete factory; the amount that has been paid in number of instalments; the number of instalments in which the amount has been withdrawn; (the name of the members of the sangha from whom the amount has been paid and the documents of the amount that has been paid be furnished)

c. the resolution copies of the authority which has approved and rejected in connection with the allotment of the land and site to the sangha, if copies are available about the opinions of the legal officers of the authority and the copies of the court judgements be furnished;

d. whether the authority is aware about the sites which have been allotted to the employees of the Binnipete Administrative Board in 10 acres of land after the judgement passed by the Madras High Court; whether the authority has not the responsibility to verify the sites which have been allotted by the authority are reached the true beneficiaries of the sangha;

e. the copies of the complaints lodged and the investigation reports conducted with regard to the said allotment be furnished?

## ERADICATION OF LOCKUP DEATH CASES

**Dr. K. Govindaraj (Elected by Legislative Assembly) -**

49 (522) Will the Minister for Home be pleased to state:-

a. the number of lockup death cases have been occurred in the State for the last 3 years; (districtwise, yearwise a separate information be furnished)

b. the reasons that have been found by the Government to the lockup death cases; (casewise a separate information be furnished)

c. whether the Government has contemplated seriously about the delay is being caused while the persons appearing before the Court who have been arrested on suspect reason; if so, the complete details about the drawback in this regard be furnished;

d. whether the Government has formulated affirmative and redressal measures to eradicate lockup death cases in this regard; if so, the information be furnished in this regard?

## TANK FILLING PROJECT

**Sri K.C.Kondaiah (Local Authorities Constituency) -**

50 (513) Will the Minister for Minor Irrigation and Law, Parliamentary Affairs and Legislation be pleased to state:-

a. whether the tank filling project is in force in the State;

b. the present stage of the work of lifting water from Tungabhadra reservoir being filled into the tanks of Bellari rural district and Kottur and in other 11 tanks;

c. the grant earmarked therefor?

## WITHDRAWAL OF THE ORDER NO:FD/157/EXP-08/2020 OF ECONOMIC MEASURE OF THE FINANCE DEPARTMENT

**Sri Arun Shahapur (Teachers' Constituency) -**

51 (560) Will the Chief Minister be pleased to state:-

a. whether the filling of vacancies in aided education institutions, school and colleges bringing under Grant-in-aid has been withheld as per the order No:FD/157/Exp-08/2020 in view of Covid-19;

b. whether the said order was withdrawn or relaxed by the Finance department; if so, the key points of the relaxing the order along with explanation be furnished;

c. if the said order has not been withdrawn by the Finance department, the timelimit within which it would be withdrawn? ( the complete details be furnished)

## CONSTRUCTION OF PERIPHERAL RING ROAD BY BDA

**Sri K.A. Thippeswamy (Nominated) -**

52 (585) Will the Chief Minister be pleased to state:-

a. whether the State Government has decided to invite international competitive bidding to construct peripheral ring road that has undertaken by Bangalore Development Authority; (if so, the complete details of the work and

complete information of the competitive tender be furnished)

b. whether the State Government has acquired the required land already to construct peripheral ring road; if so, the extent of land that has been acquired and the total cost of the acquired land; out of which, the compensation amount that has been paid already and the outstanding amount;

c. whether the required permission has been obtained from the environment and other departments to construct peripheral ring road? (complete details be furnished)

**CONSTRUCTION OF BALANCING RESERVOIR**

**Sri Basavaraj Patil Itagi (Local Authorities Constituency) -**

53 (530) Will the Minister for Water Resources be pleased to state:-

a. whether it has come to the notice of the Government that the construction work of Balancing Reservoir near Tintini bridge, Devadurga taluk of Raichur district;

b. if so, the storage of T.M.C of water would be collected;

c. the date on which the work would be takenup?

**COMPENSATION TO VICTIMS OF UPPER KRISHNA PROJECT**

**Sri Nirani Hanamant Rudrappa (Graduates' Constituency) -**

54 (607) Will the Minister for Water Resources be pleased to state:-

a. the extent of land required for implementing Upper Krishna Project 3rd stage;

b. the extent of land that has been acquired for the same;

c. whether the compensation has been provided to all the victims;

d. the amount of compensation has been provided to the victims till date; and the outstanding compensation amount yet to be provided for victims;

e. the time limit within which the remaining compensation would be provided to the victims?

## LAND ACQUISITION FOR LIFT IRRIGATION PROJECT

**Sri M.A. Gopalaswamy (Local Authorities Constituency) -**

55 (517) Will the Minister for Water Resources be pleased to state:-

a. the particulars of Lift Irrigation Project taken up in the limit of Channarayapattana of Hassan district; the number of villages in which the extent of land has been acquired for this project; (the name of the victims who lost the land and information of the villages be furnished)

b. the price fixed per acre by the Government for providing compensation to the farmers who have lost the land for the project; the grant released by the Government for the same; out of which, the amount of compensation has been paid;

c. the name of the victims who have obtained the compensation till date under this project, amount of the compensation and details of the villages be furnished;

d. the names of the victims who have not obtained the compensation till date under this projects; the amount of the compensation and details of the villages be furnished; the reasons for the delay for providing compensation to the victims;

e. the particulars of works taken up under this project; the present stage of the works; the grant sanctioned and released for the works; out of which, the amount released to the contractors? (workwise details be furnished)

## ILLEGAL RESIDING OF BANGLA AND ROHINGYAS

**Sri Muniraju Gowda P.M (Elected by Legislative Assembly) -**

56 (539) Will the Minister for Home be pleased to state:-

a. whether the illegal residing of bangla and rohingya muslims has been identified in the State; the legal action that has taken against the several officer who have made available of Aadhar card and Identity card by other Government department to these unauthorised and illegal immigrants; the number of officials who have been suspended; (details be furnished)

b. the number of Masjid and Madrasas of the State in which bangla and rohingya muslims are resided illegally; (information be furnished)

c. the particular of the measures taken by the Government in this regard;

d. the number of persons on whom the legal action has been taken who have provided shelter for illegal immigrants; (districtwise information be furnished)

e. the number of persons who left the nation without appearing before the court after the illegal migrants released on bail who were involved in serious criminal cases for the last two years? (casewise details be furnished)

## MISUSE OF ZERO TRAFFIC

**Sri M. Narayanaswamy (Local Authorities Constituency) -**

57 (623) Will the Minister for Home be pleased to state:-

a. the particulars of dignitaries to whom the zero traffic facility would be provided in the State; (the complete information be furnished)

b. whether it was not a violation of rule that legislator who arrived from Kempegowda International Airport to Rajbhavan in zero traffic before taking charge as a Minister;

c. the step that has taken against the officers who were co-operated in this incident;

d. the name of the person who was instructed to the officials/staff of women and child welfare department for welcoming ex-minister; the particulars of action initiated by the Government against the officers;

e. the step taken by the Government against the case in connetion with brining the 17 disqualified Legislators to Vidhana Soudha in the zero traffic in 2019?

**DEVELOPMENT OF TANKS UNDER MINOR IRRIGATION DEPARTMENT**

**Sri K.T.Srikantegowda (Graduates' Constituency) -**

58 (528) Will the Minister for Minor Irrigation and Law, Parliamentary Affairs and Legislation be pleased to state:-

a. the number of tank which are coming under Minor Irrigation department in the State; (details be furnished)

b. the extent of these tanks; out of which, the number of tanks that have been encroached; (details be furnished)

c. the measures taken by the Government with regard to evict such encroaches by conducting the survey of the said tanks and ponds; (details be furnished)

d. the measures taken by the Government to develop by desilting the tanks? (details be furnished)

**HUGE CORRUPTION IN MANJRA BARRAGE WORK**

**Sri Raghunath Rao Malkapure (Elected by Legislative Assembly) -**

59 (531) Will the Minister for Water Resources be pleased to state:-

a. whether it has come to the notice of the Government that the Hon'ble High Court has been passed an order to investigate that water flowing cannot be stopped due to

gate problem in manjra series barrage of Bidar district; if so, the complete information of the same be furnished;

b. the amount spent for the construction of 04 barrages; and the year in which the barrages were constructed; (complete information of contractors be furnished)

c. the total extent of area for which irrigation facility has been provided by the construction of the said series barrages (complete details be furnished)

d. if so, the reason for illegal and defects are being found in the scheme which was built by investing hundred crores of rupees; the action taken by the Government against the persons who are accountable for the same? (the complete information be furnsished)

**DESILTATION IN THE RIVERS OF KODAGU DISTRICT**

**Smt. S. Veena Achaiah (Elected by Legislative Assembly) -**

60 (578) Will the Minister for Water Resources be pleased to state:-

a. the number of rivers in which the silt has been removed in Kodagu district for the last 3 years;

b. the particulars of works takenup for the last 3 years in this regard; (details be furnished)

c. the grant incurred for the said works; (details be furnished) and the particulars of works that have been implemented (yearwise information be furnished)

d. the grant that has been provided in the financial year to the works of desilting in the rivers of the district? (the complete details of the works to be implemented be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD - 332 - Copies